# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

# ಯೆಹೆಜ್ಕೇಲನು ದರ್ಶನಗಳುಳ್ಳ ಮನುಷ್ಯನು



ಬರಹಗಾರರು: Edward Hughes
ಚಿತ್ರಲೇಖಕರು: Lazarus; Alastair Paterson
ಅಳವಡಿಸುವವರು: Ruth Klassen
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2022 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಬಹು ವರ್ಷಗಳ ಹಿಂದೆ ಬಲಿಷ್ಠ ಸೈನ್ಯಗಳು ಯೂದಾಯವನ್ನು ಆಕ್ರಮಿಸಿ ಬಹಳಷ್ಟು ದೇವ ಜನರನ್ನು ಸೆರೆಯಾಳನ್ನಾಗಿ ಬಾಬೆಲಗೆ ಕರೆದೊಯ್ಯುದರು. ಮನೆಯಿಂದ ಬಹಳ ದೂರವಿದ್ದ ಯೆಹೂದ್ಯರು ಕೆಬಾಲ್ ನದಿಯ ತೀರದಲ್ಲಿ ವಾಸಿಸುತ್ತಿದ್ದರು. ಅವರ ಮಧ್ಯದಲ್ಲಿ ದೇವರ ಸೇವಕನಾದ ಪ್ರವಾದಿ ಯೆಹೆಜ್ಕೇಲನಿದ್ದನು.



ಒಂದು ದಿನ ಯೆಹೆಜ್ಕೇಲನಿಗೆ ದೇವರಿಂದ ದರ್ಶನ ಉಂಟಾಯಿತು. ದೇವರ ಮಹಿಮೆ ಮಿಂಚಿನಂತೆ ಪ್ರಕಾಶಿಸಿತು. ಅದರ ಮಧ್ಯದಲ್ಲಿ ನಾಲ್ಕು ಜೀವಿಗಳ ಆಕಾರವು ಕಾಣಿಸಿತು. ಪ್ರತಿಯೊಂದಕ್ಕೆ ನಾಲ್ಕು ಮುಖಗಳೂ, ನಾಲ್ಕು ರೆಕ್ಕೆಗಳು ಇದ್ದವು. ಅದರ ಮೇಲೆ ಸುಂದರವಾದ ಇಂದ್ರ ನೀಲಮಣಿಯ ಸಿಂಹಾಸನವು ಪ್ರಜ್ವಲಿಸುವ ಕಾಮನ ಬಿಲ್ಲಿನ ಬೆಳಕಿನಿಂದ ತುಂಬಿತ್ತು. ಇದನ್ನು ಯೆಹೆಜ್ಕೇಲನು ನೋಡಿದಾಗ ಅವನು ಅಡ್ಡಬಿದ್ದನು.



ದೇವರು ಯೆಹೆಜ್ಕೇಲನೊಂದಿಗೆ ಮಾತನಾಡಿದನು “ನಾನು ನಿನ್ನನ್ನು ಇಸ್ರಾಯೇಲ ವಂಶಾದವರ ಬಳಿಗೆ ಕಳುಹಿಸುತ್ತಿದ್ದೇನೆ. ನನ್ನ ಮಾತುಗಳನ್ನು ಅವರಿಗೆ ತಿಳಿಸು ಏಕೆಂದರೆ ಅವರು ದ್ರೋಹಿಗಳಾಗಿದ್ದಾರೆ “ಒಂದು ಕೈ ಸುರುಳಿಯನ್ನು ಹಿಡಿದು ಬರುವುದು ಕಾಣಿಸಿತು. ಈ ಸುರುಳಿಯನ್ನು ತಿನ್ನು “ಹೋಗಿ ಇಸ್ರಾಯೇಲ ವಂಶದವರಿಗೆ ಇದರಲ್ಲಿರುವ ಸಂಗತಿಗಳನ್ನು ತಿಳಿಸು ಎಂದು ದೇವರು ಹೇಳಿದನು.



ಎಂಥ ವಿಚಿತ್ರವಾದ ಆಜ್ಞೆಯಿದು! ಆದರೆ ಯೆಹೆಜ್ಕೇಲನು ವಿಧೇಯನಾಗಿ ಆ ಸುರುಳಿಯನ್ನು ತಿಂದು ಹೊರಟನು.

ದೇವರಾತ್ಮವು ಯೆಹೆಜ್ಕೇಲನನ್ನು ಎತ್ತಿಕೊಂಡು ಕೆಬಾತ್ ನದಿಯ ಹತ್ತಿರ ಸೆರೆಯಾಗಿ ಒಯ್ಯಲ್ಪಟ್ಟ ಯೆಹೂದ್ಯ ಜನರು ವಾಸವಾಗಿದ್ದ ಸ್ಥಳಕ್ಕೆ ಕರೆದೊಯ್ಯಿತು. ನೋಡಿದ್ದಕ್ಕೆ ಬೆರಗಾಗಿ ಅವನು ಏಳು ದಿವಸ ಅಲ್ಲೇ ಅವರ ಮಧ್ಯದಲ್ಲಿ ಸ್ತಬ್ದನಾಗಿ ಇದ್ದು ಬಿಟ್ಟನು. ನಂತರ ದೇವರು ಯೆಹೆಜ್ಕೇಲನನ್ನು ಕಾವಲುಗಾರನನ್ನಾಗಿ ಮಾಡಿದನು. ಅವನು ದೇವರಿಗೆ ಅವಿಧೇಯರಾಗಿ ನಡೆದುಕೊಳ್ಳಬಾರದು ಎಂದು ದುಷ್ಟ ಜನರಿಗೆ ಎಚ್ಚರಿಸ ಬೇಕಾಗಿತ್ತು.





ದೇವರ ವಾಕ್ಯವನ್ನು ಜನರಿಗೆ ಸ್ಪಷ್ಟಪಡಿಸಲು ಯೆಹೆಜ್ಕೇಲನು ವಿಚಿತ್ರಕರವಾದ ಅನೇಕ ಸಂಗತಿಗಳನ್ನು ಮಾಡಿದನು. ಅವನು ತುಂಡು ಹಂಚಿನ ಮೇಲೆ ಯೆರೂಸಲೇಮಿನ ಚಿತ್ರವನ್ನು ಅರಳಿಸಿಬಿಟ್ಟನು. ಅವನು ಯೆರೂಸಲೇಮಿನ ಸುತ್ತ ಬಲಿಷ್ಟ ಸೈನ್ಯಗಳ ಚಿತ್ರವನ್ನು ಬಿಡಿಸುತ್ತಿರುವಾಗ ಬಹುಶಃ ಜನರು ಅವನ ಹಿಂದೆ ಬಂದು ಅವನನ್ನು ನೋಡಿರಬಹುದು. ದೇವರ ಪರಿಶುದ್ಧ ಪಟ್ಟಣವು ಕೂಡಲೇ ನಾಶವಾಗುತ್ತದೆ ಎಂದು ಅವನು ತೋರಿಸುತ್ತಿದ್ದನು.

ಇಸ್ರಾಯೇಲ, ಉತ್ತರದಿಕ್ಕಿನ ರಾಜ್ಯವು ೩೯೦ ವರ್ಷ ಹಾಗೂ ಯೆಹೂದ, ದಕ್ಷಿಣದಿಕ್ಕಿನ ರಾಜ್ಯವು ೪೦ ವರ್ಷಗಳವರೆಗೆ ದೇವರಿಗೆ ಅವಿಧೇಯವಾಗಿದ್ದವು. ಆದರಿಂದಲೇ ಇಸ್ರಾಯೇಲ ನಾಶವಾಯಿತು ಹಾಗೆಯೇ ಯೆಹೂದವು ಶೀಘ್ರವೇ ಬಿದ್ದು ಹೋಗುವುದು. ಜನರಿಗೆ ಅವರ ಪಾಪದ ವರುಷಗಳನ್ನು ನೆನಪಿಸಲು ೩೯೦ ದಿನಗಳು ತನ್ನ ಎಡಮಗ್ಗುಲಲ್ಲಿ ಹಾಗೂ ೪೦ ದಿನಗಳು ತನ್ನ ಬಲಮಗ್ಗುಲಲ್ಲಿ ಮಲಗಿಕೊಳ್ಳಲು ದೇವರು ಯೆಹೆಜ್ಕೇಲನಿಗೆ ಹೇಳಿದನು.





ಬಹುಶಃ ಆರಂಭದಲ್ಲಿ ಜನರು ಯೆಹೆಜ್ಕೇಲನು ತುಂಬಾ ವಿಚಿತ್ರವಾದ ಮನುಷ್ಯನು ಎಂದು ಅಂದುಕೊಂಡಿರಬಹುದು. ದೇವರು ಆತನಿಗೆ ಹೇಳಿದ ಎಲ್ಲಾ ಕಾರ್ಯಗಳನ್ನು ಮಾಡುತ್ತಿದ್ದ ಒಂದು ದಿನ ಆತನು ತನ್ನ ಕೂದಲನ್ನು ಬೋಳಿಸಿ ಮೂರನೆಯ ಭಾಗವನ್ನು ಸುಟ್ಟನು. ಇದು ಏನು ತೋರಿಸುತ್ತಿತ್ತು ಎಂದರೆ ಯೆರೂಸಲೇಮಿನ ಮೂರನೆಯ ಒಂದು ಭಾಗದ ಜನರು ಬಾಬೆಲಿನ ಸೈನ್ಯ ಪಟ್ಟಣವನ್ನು ಆಕ್ರಮಿಸಿದಾಗ ರೋಗದಿಂದ ಹಾಗೂ ಬರದಿಂದ ಸತ್ತು ಹೋಗುವರು ಎಂದು.



ಯೆಹೆಜ್ಕೇಲನು ಕೂದಲಿನ ಮೂರನೆ ಭಾಗವನ್ನು ಕತ್ತಿಯಿಂದ ಕತ್ತರಿಸಿದನು. ಒಂದನೆಯ ಮೂರನೆ ಭಾಗದಷ್ಟು ಜನರು ವೈರಿಯ ಕತ್ತಿಯಿಂದ ಸಾಯುತ್ತಾರೆಂಬುದನ್ನು ತೋರಿಸಲು ಹೀಗೆ ಮಾಡಿದನು. ಕೋನೆಯ ಮೂರನೆಯ ಭಾಗವನ್ನು ಯೆಹೆಜ್ಕೇಲನು ಗಾಳಿಯಲ್ಲಿ ತೂರಿ ಬಿಟ್ಟನು. ಆದರೆ ಕೇಲವು ಕೂದಲನ್ನು ತನ್ನ ಮೇಲಂಗಿಯ ಅಂಚಿನಲ್ಲಿ ಕಟ್ಟಿದನು. ದೇವರು ಕೆಲವು ಜನರನ್ನು ಸುರಕ್ಷಿತವಾಗಿರಿಸಿ, ಅವರನ್ನು ವಾಗ್ದಾನದ ದೇಶಕ್ಕೆ



ನಡಿಸುವನೆಂಬುದಕ್ಕೆ ಅದು ಚಿಹ್ನೆಯಾಗಿತ್ತು.

ಧೈರ್ಯಶಾಲಿಯಾದ ಪ್ರವಾದಿಯು ಸೆರೆಯಲ್ಲಿದ್ದ ಯೆಹೂದ್ಯರಿಗೆ ‘ಸುಗಮದ ಸಂಗತಿಗಳು ನಡೆಯುತ್ತವೆ ಎಂದು ನೀವು ಅಂದುಕೊಂಡಿದ್ದಿರಿ ಆದರೆ ಕೆಟ್ಟ ಸಂಗತಿಗಳೆ ನಿಮಗೆ ಸಂಭವಿಸುತ್ತವೆ’. ಎಂದು ಹೇಳಿದನು. ಅದಕ್ಕೆ ಜನರು ಯೆಹೆಜ್ಕೇಲನ ಮೇಲೆ ಕೋಪಗೊಂಡರು. ಆದರೂ ಸಹ ದೇವರ ಸತ್ಯ ವಾಕ್ಯವನ್ನು ಹೇಳುವುದನ್ನು ನಿಲ್ಲಿಸಲಿಲ್ಲ. ಒಂದು ದಿನ ಯೆಹೆಜ್ಕೇಲನು ಎಸ್ರಾಯೆಲ್ಯರ ಹಿರಿಯರೊಂದಿಗೆ ಕುಳಿತಿರುವಾಗ ದೇವರು ಅವನಿಗೆ ಒಂದು ದರ್ಶನವನ್ನು ಕೊಟ್ಟನು. ಆ ದರ್ಶನದಲ್ಲಿ ದೇವರು ಅವನ ಕೂದಲನ್ನು ಹಿಡಿದು ಅವನನ್ನು ಯೇರುಸಲೇಮಿನ ದೇವಾಲಯಕ್ಕೆ ಕರೆದುಕೊಂಡು ಹೋದನು.



ದೇವರು ಅವನನ್ನು ದೇವಾಲಯಕ್ಕೆ ಕೆರೆದುಕೋಂಡು ಹೋಗಿ, ಅಲ್ಲಿ ಹರಿದಾಡುವ ಅಶುದ್ಧವಾದ ಜೀವಿಗಳನ್ನು ಮತ್ತು ಇತರೆ ದೇವರುಗಳ ವಿಗ್ರಹಗಳನ್ನು ತೋರಿಸಿದನು. ಇಂತಹ ವಸ್ತುಗಳು ದೇವರ ಆಲಯದಲ್ಲಿ ಇರಬಾರದಾಗಿತ್ತು.



ದೇವರ ಬದಲಾಗಿ ಎಸ್ರಾಯೇಲಿನ ಜನರು ಇಂತಹವುಗಳನ್ನು ಆರಾಧಿಸುತ್ತಿದ್ದರು. ಯೆಹೆಜ್ಕೇಲನಿಗೆ ತನ್ನ ದರ್ಶನದಲ್ಲಿ ದೇವರ ಪ್ರಸನ್ನತೆಯು ದೇವಾಲಯವನ್ನು ಬಿಟ್ಟು ಹೋಗುವುದನ್ನು ಮತ್ತು ದೇವಾಲಯ ನಾಶವಾಗುವುದನ್ನು ಕಂಡನು. ಈ ದರ್ಶನವು ಮುಗಿದ ನಂತರ ಯೆಹೆಜ್ಕೇಲನು ಯೇಹೂದ್ಯರಿಗೆ ನಡೆದದ್ದನ್ನು ಹೇಳಿದನು.





ದೇವರು ಹೇಳಿದಹಾಗೆ ಎಲ್ಲವೂ ನೇರವೇರಿತು, ಯೇರುಸಲೇಮ್ ಕೆಡವಲ್ಪಟ್ಟಿತು. ಅನೇಕ ಜನರು ನಾಶವಾದರು. ಬೆಬೆಲೋನಿನಲ್ಲಿ ಸೆರೆಯಾಗಿದ್ದ ಜನರು ಈ ಸಂಗತಿಗಳನ್ನು ಕೇಳಿದರು. ಅವರು ಅದಕ್ಕೆ ದೇವರು ನಮ್ಮನ್ನು ಶಾಶ್ವತವಾಗಿ ತೋರೆದಿದ್ದಾನೆ ಎಂದು ಅಂದುಕೋಂಡರು.

ದೇವರು ತನ್ನ ಪ್ರವಾದಿಗೆ ಇನ್ನೊಂದು ದರ್ಶನವನ್ನು ಕೊಟ್ಟನು, ದೇವರು ಯೆಹೆಜ್ಕೇಲನನ್ನು ಮನುಷ್ಯರ ಒಣಗಿದ ಎಲುಬುಗಳನ್ನು ಹಾಕಿದ್ದ ಕಣಿವೆಗೆ ನಡೆಸಿದನು.



“ನರಪುತ್ರನೇ, ಮತ್ತೆ ಈ ಎಲುಬುಗಳಿಗೆ ಜೀವ ಬರಬಹುದೋ?” ಎಂದು ದೇವರು ಯೆಹೆಜ್ಕೇಲನನ್ನು ಕೇಳಲು, “ಓ ದೇವರೆ ನಿನಗೆ ಗೊತ್ತು” ಎಂದು ಉತ್ತರ ಕೊಟ್ಟನು. ಹೌದು ಒಣಗಿದ ಎಲುಬುಗಳಿಗೆ ಮತ್ತೇ ಜೀವಬರಲು ಸಾದ್ಯವಿಲ್ಲ.



ದೇವರು ಅವನಿಗೆ “ಈ ಎಲುಬುಗಳಿಗೆ ಪ್ರವಾದಿಸು ಎಂದು ಹೇಳಿದನು, ಅಂದರೆ ಓ ಎಲುಬುಗಳೇ ದೇವರ ವಾಕ್ಯವನ್ನು ಕೇಳಿಸಿಕೊಳ್ಳಿರಿ, ನಿಮಗೆ ಜೀವ ಬರುವುದು” ಎಂಬ ಮಾತಿಗೆ ವಿಧೇಯನಾಗಿ ಪ್ರವಾದಿಸಿದನು. ಯೆಹೆಜ್ಕೇಲನಿಗೆ ಒಂದು ತರಹದ ಲಟ ಪಟ ಶಬ್ದ ಕೇಳಿಸಿತು.

ಅದು ಏನಾಗಿರಬಹುದು?



ಒಣಗಿದ ಎಲುಬುಗಳು ಒಂದಕ್ಕೊಂದು ಸೇರಿ ದೇಹಗಳಾಗಿ ಮಾರ್ಪಡುವುದನ್ನು ಪ್ರವಾದಿಯು ನೋಡಿ ಆಶ್ಚರ್ಯಪಟ್ಟನು.



ನಂತರ ಅವುಗಳ ಮೇಲೆ ಮಾಂಸಖಂಡಗಳು ಬಂದವು.



ನಂತರ ಅವುಗಳ ಮೇಲೆ ಚರ್ಮವು ಹೊದಿಸಲ್ಪಟ್ಟಿತು ಆದರೆ ಅವುಗಳಿಗೆ ಶ್ವಾಸವಿರಲಿಲ್ಲಾ.



ಕರ್ತನು ಅವನಿಗೆ, “ನರಪುತ್ರನೇ, ನೀನು ಚತುರ್ದಿಕ್ಕುಗಳಿಂದ ಗಾಳಿಯು ಬಂದು ಅವುಗಳನ್ನು ಹೊಕ್ಕು, ಅವರು ಮತ್ತೇ ಜಿವಿಸುವಂತೆ ಪ್ರವಾದನೆಯನ್ನು ನುಡಿ” ಎಂದು ಹೇಳಿದನು. ಆ ರೀತಿ ಯೆಹೆಜ್ಕೇಲನು ಪ್ರವಾದಿಸಲು ಅವುಗಳೀಗೆ ಶ್ವಾಸ ಬಂತು ಅವರು ಬದಕುವವರಾದರು, ಅವರು ಕಾಲುಗಳ ಮೇಲೆ ನಿಂತುಕೋಂಡರು. ಒಂದು ದೂಡ್ಡ ಸೈನ್ಯವೆ ಕಣಿವೆಯಲ್ಲಿ (ತಗ್ಗು) ನಿಂತುಕೊಂಡಿತು.



ಯೇರುಸಲೇಮ್ ಪಟ್ಟಣ ಕೆಡವಲ್ಪಟ್ಟಾಗ ಬೆಬೆಲೋನಿನಲ್ಲಿ ಸೆರೆಯಾಗಿದ್ದ ಯೆಹೂದ್ಯರು ನೀರಿಕ್ಷೆಯನ್ನು ಕಳೆದುಕೋಂಡಿದ್ದಾರೆಂದು ದೇವರಿಗೆ ಗೋತ್ತಿತ್ತು. ದೇವರು ಯೆಹೆಜ್ಕೇಲನ ದರ್ಶನದ ಮೂಲಕ ಅವರಿಗೊಂದು ಸಂದೇಶವನ್ನು ಕಳುಹಿಸಿದನು. “ಈ ಎಲುಬುಗಳೇ ಎಸ್ರಾಯೇಲ್ ಸಮೂಹ, ನಾನು ಅವರ ಮೇಲೆ ನನ್ನ ಆತ್ಮವನ್ನು ಸುರಿಸುವೇನು ಮತ್ತು ಅವರನ್ನು ಸ್ವಂತ ಸ್ಥಳದಲ್ಲಿ ಅವರನ್ನು ಇರಿಸುವೆನು” ಅಂದನು.



ದೇವರಿದ ಎಂಥಹ ನೀರಿಕ್ಷೇಯ ಸಂದೇಶ! ಯೆಹೂದ್ಯರು ತಮ್ಮ ಸ್ವಂತ ಸ್ಥಳಕ್ಕೆ ಹಿಂತಿರುಗಿದಾಗ ಯೆಹೆಜ್ಕೇಲನ ಮೂಲಕ ಹೇಳಿದ ಪ್ರವಾದನೆಯು ನೆರವೆರಿತು. ದೇವರು ಅವರನ್ನು ಮನೆಗೆ ಕರೆತಂದಿದ್ದಾನೆಂದು ಮನವರಿಕೆಯಾಯಿತು. ದೇವರು ಹೇಳಿದಂತಹ ಮಾತುಗಳು ಯಾವಾಗಲು ನೆರವೆರುವವು.



# ಯೆಹೆಜ್ಕೇಲನು ದರ್ಶನಗಳುಳ್ಳ ಮನುಷ್ಯನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೆಹೆಜ್ಕೇಲನು

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16